ಭೂಸೇನಾ ನಿಗಮದವರು ನಿರ್ಮಾಣ ಮಾಡುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಅಡಿಪಾಯವು ಕಳಪೆ ದರ್ಜೆಯ ಅಡಿಪಾಯವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ. ನಾನು ದಿನಾಂಕ 8–2–93ರಂದು ಆ ಭಾಗಕ್ಕೆ ಭೇಟಿ ನೀಡಿದಾಗ ಆ ಭಾಗದ ಪ್ರಮುಖರ ಸಮಕ್ಷಮದಲ್ಲಿ ಈ ಕಟ್ಟಡವನ್ನು ವೀಕ್ಷಿಸಿದರೆ ಎಲ್ಲಿಯೂ ಸಹ ಅಡಿಪಾಯ ಭದ್ರವಾಗಿಲ್ಲದೆ ಈ ಕಟ್ಟಡ ಅಭದ್ರವೆಂದು ಪರಿಗಣಿಸಿ ನಾನು ಸಂಬಂಧಪಟ್ಟ ಉಪನಿರ್ದೇಶಕರಿಗೆ ಹೇಳಿದರೆ ಅವರು ಕೈಗೊಂಡಿರುವ ಕ್ರಮವೇನು;

ಇ. ಭೂಸೇನಾ ನಿಗಮದವರು ಸೇಡಂ ತಾಲ್ಲೂಕಿನಲ್ಲಿ ಕಳಪೆ ದರ್ಜೆಯ ಮನೆಗಳ ನಿರ್ಮಾಣ ಮಾಡಿದರೆ ಮನೆಗಳು ಕುಸಿಯುವುದಿಲ್ಲವೇ;

ಈ. ಲಕ್ಷಾನುಗಟ್ಟಲೇ ರೂಪಾಯಿ ಮುಂಗಡವಾಗಿ ಇವರಿಗೆ ನೀಡಿ ಇಂತಹ ಅಭದ್ರವಾದ ಕಟ್ಟಡಗಳನ್ನು ನಿರ್ಮಿಸಿದವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು; ಸುಭದ್ರ ಮನೆಗಳನ್ನು ಕಟ್ಟಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಮತ್ತು ಭೂಸೇನಾ ನಿಗಮ ಸಚಿವರು):–

ಅ. ಇಲ್ಲ

ಆ. ಮಾನ್ಯ ಸದಸ್ಯರು ದಿ: 8–2–93ರಂದು ಆ ಭಾಗಕ್ಕೆ ಭೇಟಿ ನೀಡಿರುತ್ತಾರೆ. ತದನಂತರ ಉಪನಿರ್ದೇಶಕರು ಸಂಬಂಧಿಸಿದ ಸಹಾಯಕ ನಿರ್ದೇಶಕರು ಹಾಗೂ ಇಂಜಿನೀಯರ್‌ರವರ ಜೊತೆಗೆ ಸ್ಥಳ ತನಿಖೆ ಮಾಡಿರುತ್ತಾರೆ. ಆ ಸಮಯದಲ್ಲಿ ಕೆಲಸ ಪ್ರಗತಿಯಲ್ಲಿದ್ದು ಬುನಾದಿಯು ಭದ್ರವಾದ ಸ್ಥಿತಿಯಲ್ಲಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಇ. ಕಳಪೆ ನಿರ್ಮಾಣ ಮಾಡಿಲ್ಲವಾದ ಕಾರಣ, ಮನೆಗಳು ಕುಸಿಯುವ ಪ್ರಮೇಯವಿರುವುದಿಲ್ಲ.

ಈ. ಭೂಸೇನಾ ನಿಗಮದ ನಿಯಮಗಳ ಪ್ರಕಾರ ಕಳಪೆ ದರ್ಜೆಯ ಮನೆ ಕಟ್ಟಿದ್ದು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಯನ್ನು ವಿಚಾರಣೆಗೆ ಗುರಿಪಡಿಸುವುದಲ್ಲದೆ, ಸಂಬಂಧಪಟ್ಟವರಿಂದ ನಷ್ಟದ ಹಣವನ್ನು ಭರಿಸಲಾಗುವ ವ್ಯವಸ್ಥೆ ಇದೆ. ಅಲ್ಲದೆ, ಕಳಪೆ ಮಟ್ಟದ ಕಟ್ಟಡವನ್ನು ನಿರ್ಮಿಸಿರುವುದು ಸಾಬೀತಾದರೆ ನಿರ್ಮಿಸಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಕಾಮಗಾರಿ ಕೆಲಸ

(2054): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಭೀಮನಹಳ್ಳಿ ಬೆಳಗೇರ ರಸ್ತೆ ಹಾಗೂ ದಂಡಗುಂಡ - ಸಂಕನೂರು ರಸ್ತೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆಯ ಹಣದಲ್ಲಿ ಮಂಜೂರಾಗಿ 2 ವರ್ಷಗಳಾದಾರೂ ಸಹ ಕೆಲಸ ಪೂರ್ತಿಯಾಗಿಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ;

2. ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಕಾಮಗಾರಿಗಳು ವಿಳಂಬವಾಗಿರುವುದಕ್ಕೆ ಕೈಗೊಂಡಿರುವ ಕ್ರಮಗಳು ಏನು;

3. ಈ ಎರಡು ಕಾಮಗಾರಿಗಳಿಗೆ ಮಂಜೂರಾಗಿರುವ ಹಣ ಎಷ್ಟು; ಕಾಮಗಾರಿಗಳವಾರು ವಿವರ ನೀಡುವುದು;

4. ಈ ಕಾಮಗಾರಿಗಳಿಗೆ ಖರ್ಚಾಗಿರುವ ಹಣಕ್ಕೆ ತಕ್ಕ ಕೆಲಸ ಆಗಿದೆಯೇ; ಒಂದು ವೇಳೆ ಹಣ ಖರ್ಚಾಗಿರುವಂತೆ ಕೆಲಸವಾಗಿಲ್ಲವೆಂದರೆ ಕೈಗೊಂಡಿರುವ ಕ್ರಮಗಳು ಏನು;

5. ಈ ಎರಡು ಕಾಮಗಾರಿಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

1. ಹೌದು.

ಈ ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ 1992ರ ಮಾರ್ಚಿ ತಿಂಗಳಲ್ಲಿ ನೀಡಲಾಗಿರುವುದರಿಂದ ಎರಡು ವರ್ಷಗಳು ಕಳೆದಿರುವುದಿಲ್ಲ.

2. ಕೆಲಸಗಳನ್ನು ಮುಗಿಸುವ ದಿನಾಂಕ ಜೂನ್ 1993 ಆಗಿರುವುದರಿಂದ ವಿಳಂಬವಾಗಿರುವುದಿಲ್ಲ.

3. 1. ಭೀಮನಹಳ್ಳಿ – ಯಾಗಾಪೂರ ವಾಯ ಬೆಳಗೇರ ರಸ್ತೆ
= ರೂ. 26.65 ಲಕ್ಷಗಳು
2. ದಂಡಗುಂಡ – ಸಂಕನೂರ ರಸ್ತೆ
= ರೂ. 3.40 ಲಕ್ಷಗಳು

4. ಖರ್ಚಿಗೆ ತಕ್ಕಂತೆ ಕೆಲಸ ಆಗಿರುತ್ತದೆ.

5. ಈ ಎರಡು ಕೆಲಸಗಳನ್ನು ಜೂನ್ 1993ರ ಅಂತ್ಯದವರೆಗೆ ಪೂರ್ಣಗೊಳಿಸಲಾಗುವುದು.

ಸೇಡಂ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ

(2056): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಕ್ಕೆ 25–30 ಸಾವಿರ ಜನಸಂಖ್ಯೆ ಇದ್ದು ಕಂದಾಯ ಉಪವಿಭಾಗ ಕೇಂದ್ರವಾಗಿ, ಸುತ್ತಲೂ ಬೃಹತ್ ಸಿಮೆಂಟ್ ಕಾರ್ಖಾನೆಗಳು ಇದ್ದು ಈ ವರ್ಷ ಅನಾವೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈ ನಗರಕ್ಕೆ ಈ ವರ್ಷದ ಅನಾವೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯುಂಟಾಗಿದೆ ಎಂದು ನಾನು ಸಂಬಂಧಪಟ್ಟ ಸಚಿವರಿಗೆ ಮಾಹಿತಿ ನೀಡಿದ್ದರೂ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮವೇನು;

ಇ. ಇಂತಹ ದೊಡ್ಡ ಜನಸಂಖ್ಯೆ ಇರುವ ನಗರಕ್ಕೆ ಅನಾವೃಷ್ಟಿಯ ಶೀರ್ಷಿಕೆ ಹಣದಿಂದ ಈ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಬಹುದೇ; ಹಾಗೂ ನಿವಾರಿಸುವುದು ಯಾವಾಗ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.